# ದಾವಣಗೆರೆ ವಿಶ್ವವಿದ್ಯಾನಿಲಯ
# DAVANGERE UNIVERSITY

ಕುಲಸಚಿವ (ಪರೀಕ್ಷಾಂಗ) ರವರ ಕಚೇರಿ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420/208104.

Office of the Registrar (Evaluation)
Shivagangothri, Davangere -577007.
Phone No. 08192-208420/208104.

**Email**: examination@davangereuniversity.ac.in / registrarevalutiondvg2@gmail.com


ಸಂಖ್ಯೆ:ದಾವಿ:ಪವಿ:ಬಿ.ಇಡಿ:2025-26/323

ದಿನಾಂಕ:08.05.2025

## ಃ ಸುತ್ತೋಲೆ ಃ

ವಿಷಯ ಃ ಆಂತರಿಕ ಅಂಕಗಳ ಪರಿಶೀಲನೆಗೆ TERM ಸಮಿತಿ ರಚಿಸಿಕೊಳ್ಳುವ ಕುರಿತು.

ಉಲ್ಲೇಖ ಃ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06.05.2025

*****

2024-25 ನೇ ಶೈಕ್ಷಣಿಕ ಸಾಲಿನ ಬಿ.ಇಡಿ ಪದವಿಯ **ಪ್ರಥಮ** ಮತ್ತು **ತೃತೀಯ** ಸೆಮಿಸ್ಟರ್ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪರಿಶೀಲನೆಗೆ ಸಂಬಂಧಿಸಿದಂತೆ, ಆಯಾ ಕಾಲೇಜುಗಳ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಇಬ್ಬರು ಹಿರಿಯ ಉಪನ್ಯಾಸಕರನ್ನು ಒಳಗೊಂಡಂತೆ **"ಶಿಕ್ಷಕರ ಶಿಕ್ಷಣದ ನಿಯಂತ್ರಣ ಮತ್ತು ಉಸ್ತುವಾರಿ ಸಮಿತಿ"** (Teacher Education Regulatory and Monitoring Cell -TERM) ಯನ್ನು ಕಾಲೇಜು ಹಂತದಲ್ಲಿ ರಚಿಸಿಕೊಂಡು ಆಯಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ದಿನಾಂಕ:19.05.2025 ರಿಂದ 21.05.2025 ರವರೆಗೆ ಮೌಖಿಕ ಸಂದರ್ಶನವನ್ನು ನಡೆಸಿ ಆಂತರಿಕ ಅಂಕಗಳನ್ನು ನಮೂನೆ 1, 2 ಮತ್ತು 3ರಲ್ಲಿ ಸಿದ್ದಪಡಿಸಿದ ಹಾರ್ಡ್ ಪ್ರತಿಯನ್ನು ದಿನಾಂಕ:23.05.2025 ರಂದು ಸಂಜೆ 4.30 ರೊಳಗೆ ದ್ವಿಪ್ರತಿಗಳಲ್ಲಿ ಕಡ್ಡಾಯವಾಗಿ ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ.

ವಿವರ

| SGPA | Letter Grade | Description of Result/Grade |
|---|---|---|
| > = 6.0- < 7.0 | B+ (Good) | First Class |
| > = 7.0- <8.0 | A (Very Good) | First Class Distinction |
| > = 8.0- < 9.0 | A+ (Excellent) | First Class Exemplary |
| > = 9.0- < 10.0 | O (Outstanding) | Outstanding |

| Semester | Range | | | |
|---|---|---|---|---|
| | 10 Marks | 20 Marks | 50 Marks | 150 Marks |
| I | 7-9 | 14-19 | 35-47 | 108-143 |
| III | 7-9 | 14-19 | 35-47 | 108-143 |

**ಸೂಚನೆಗಳು:**

1. ವಿದ್ಯಾರ್ಥಿಗಳಿಗೆ ನೀಡುವ ಆಂತರಿಕ ಅಂಕಗಳು ಹಿಂದಿನ ಸೆಮಿಸ್ಟರ್‌ನ SGPA/CGPA ಗೆ ಅನುಗುಣವಾಗಿರತಕ್ಕದ್ದು.
2. ಶೇಕಡ 10 ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಗರಿಷ್ಠ ಶೇಕಡ 90 ರಷ್ಟು ಅಂಕಗಳನ್ನು ನೀಡಬಹುದಾಗಿದೆ.
3. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಆಂತರಿಕ ಅಂಕಗಳು ವಿಶ್ವವಿದ್ಯಾನಿಲಯದ ಡೀನರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ TERM ಸಮಿತಿಯ ಮರುಪರಿಶೀಲನೆಗೆ ಒಳಪಟ್ಟಿರುತ್ತದೆ.
4. ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವಲ್ಲಿ, ವಿಶ್ವವಿದ್ಯಾನಿಲಯದ ನಿಯಮ/ಆದೇಶಗಳನ್ನು ಮೀರಿದ ಸಂದರ್ಭಗಳಲ್ಲಿ, ಅಂತಹ ಕಾಲೇಜುಗಳಿಗೆ ದಂಡಶುಲ್ಕ ರೂ.25,000=00ಗಳನ್ನು ವಿಧಿಸಲಾಗುವುದು.
5. ವಿದ್ಯಾರ್ಥಿಗಳ ಶೇಕಡಾವಾರು ಹಾಜರಾತಿಯನ್ನು ಕಾಲೇಜು ಹಂತದ TERM ಸಮಿತಿ ಪರಿಶೀಲಿಸಿ, ಖಚಿತಪಡಿಸಿಕೊಳ್ಳಬೇಕು ಇಲ್ಲವಾದಲ್ಲಿ ಇದಕ್ಕೆ ಆಯಾ ಕಾಲೇಜಿನ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗುತ್ತಾರೆ.

6. ಕಾಲೇಜು ಹಂತದಲ್ಲಿ ರಚಿಸಿಕೊಂಡ TERM ಸಮಿತಿ ಸದಸ್ಯರುಗಳಿಗೆ ಲಭ್ಯ ಭತ್ಯೆಗಳನ್ನು ಪಾವತಿಸಲು ಆಯಾ ಕಾಲೇಜುಗಳಲ್ಲಿಯೇ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು, ಈ ಸಬಂಧವಾಗಿ ವಿಶ್ವವಿದ್ಯಾನಿಲಯದಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

**ಷರಾ:** UUCMS ಪರೀಕ್ಷಾ ತಂತ್ರಾಂಶದಲ್ಲಿ ದಾಖಲಿಸುವ ಆಂತರಿಕ ಅಂಕಗಳನ್ನು ವಿಶ್ವವಿದ್ಯಾನಿಲಯವು ಕಾಲೇಜುಗಳಿಗೆ ನಿರ್ದೇಶನ ನೀಡುವವರೆಗೂ FREEZ ಮಾಡಬಾರದಾಗಿ ಸೂಚಿಸಲಾಗಿದೆ.

ಕುಲಸಚಿವ (ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577 007

**ಗೆ,**
**ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ,**

ಪ್ರತಿ:

1. ಆಪ್ತ ಸಹಾಯಕರು, ಮಾನ್ಯ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
2. ಡೀನರು, ಶಿಕ್ಷಣ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
3. ಉಪಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ಅಧೀಕ್ಷಕರು / ವಿಷಯ ನಿರ್ವಾಹಕರು, ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಕಛೇರಿ ಪ್ರತಿ.